ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.409/2014

ದಿನಾಂಕಃ16-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ 1 ಸಿ.ಡಬ್ಲ್ಯೂಃ 1

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ಅವರಿಂದಃ-

ಹರೀಶ್ ಬಿನ್ ನಾಗರಾಜಪ್ಪ ನನ್ನು ತೋರಿಸಿ ಪೊಲೀಸರು ನನಗೆ ಇವರನ್ನು ಗುರುತಿಸುತ್ತೀರಾ ಎಂದು ಕೇಳಿದ್ದು ನಾನು ರೈಲಿನಲ್ಲಿ ಕುಳಿತಿದ್ದಾಗ ರೈಲಿನ ಒಳಗಡೆ ಓಡಾಡುತ್ತಿದ್ದನು ಎಂದು ಹೇಳಿರುತ್ತೇನೆ. ಆ ದಿನ ಠಾಣೆಯಲ್ಲಿ ತಾಳಿ ಮತ್ತು ಅದಕ್ಕೆ ಹಾಕಿದ್ದ ಕೊಂಡಿಯನ್ನು ತೋರಿಸಿರುತ್ತಾರೆ. ಅದನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಸದರಿ ತಾಳಿ ಮತ್ತು ಅದಕ್ಕೆ ಲಗತ್ತಾಗಿರುವ ಕೊಂಡಿಯನ್ನು ತೋರಿಸಲಾಗಿ ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ.೧ ಎಂದು ಗುರುತಿಸಲಾಯಿತು. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರರೋಪಿತರು ಈ ದಿನ ಗೈರುಹಾಜರಾಗಿದ್ದು ಅವರುಗಳ ಗುರುತಿನ ಬಗ್ಗೆ ತಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿತರುಗಳ ಪರ ವಕೀಲರುಳು ತಿಳಿಸಿರುತ್ತಾರೆ.

ಪಾಟೀಸವಾಲುಃ ೩ನೇ ಆರೋಪಿಯ ಪರವಾಗಿ ಶ್ರೀ ಬಿ ಟಿ ಕೆ ವಕೀಲರಿಂದಃ-

ನಾನು ಆ ದಿನ ತಿಪಟೂರಿನಿಂದ ತರೀಕೆರೆಗೆ ಪ್ರಯಾಣ ಮಾಡುತ್ತಿದ್ದೆ. ನಾನು ಮತ್ತು ನನ್ನ ಅಕ್ಕ ಪ್ರಯಾಣ ಮಾಡುತ್ತಿದ್ದೆವು. ೨ ಪ್ರತ್ಯೇಕ ಟಿಕೇಟ್ ಪಡೆದುಕೊಂಡಿದ್ದೆವು. ದಿಃ೦೨.೦೨.೨೦೧೪ ರಂದು ನಾನು ಪಿರ್ಯಾದಿಯನ್ನು ಕೊಟ್ಟಿರುತ್ತೇನೆ. ಮು ಮಾ ೧ ರ ಆಕಾರವನ್ನು ಬದಲಾಯಿಸಿರುತ್ತಾರೆಯೇ ಎಂದರೆ ಸಾಕ್ಷಿಯು ಅದನ್ನು ನನ್ನ ಅಕ್ಕ ಹೇಳಬೇಕು ಎಂದು ಹೇಳುತ್ತಾರೆ. ಮು ಮಾ ೧ ಮೊದಲು ಈ ರೀತಿ ಇರಲಿಲ್ಲವೇ ಎಂದರೆ ನನಗೆ ಗೊತ್ತಿಲ್ಲ. ಮು ಮಾ ೧ ಈಗ ನನಗೆ ತೋರಿಸಿದಂತೆ ಅದು ನನ್ನ ಅಕ್ಕನದ್ದು ಎಂದು ನನಗೆ ಹೇಳಲು ಆಗುವುದಿಲ್ಲ ಅದು ನನ್ನ ಅಕ್ಕ ಹೇಳಬೇಕು. ನನಗೆ ಪೊಲೀಸರು ಮು ಮಾ ೧ ನ್ನು ಮಾತ್ರ ತೋರಿಸಿದ್ದು ಯಾವುದೇ ಮುತ್ತು, ಹವಳ ಮತ್ತು ಕರಿಮಣಿ ತೋರಿಸಿರುವುದಿಲ್ಲ.

ನನ್ನ ಅಕ್ಕನ ಗಂಡನಿಗೆ ಕ್ಯಾನ್ಸರ್ ಇದ್ದ ಕಾರಣ ಅವರನ್ನು ಆಸ್ಪತ್ರೆಯಿಂದ ಕರೆದುಕೊಂಡು ಬರುತ್ತಿದ್ದ ಕಾರಣ ದೂರನ್ನು ನೀಡಲು ೧೦ ದಿನ ತಡವಾಗಿದೆ. ೨೦೧೪ ನೇ ಸಾಲಿನಲ್ಲಿ ಪೋನ್ ವಗ್ಯೆರೆ ಇತ್ತು ಎಂದರೆ ಸರಿ. ನಾವು ಆ ದಿನ ರೈಲ್ವೆ ಟಿಕೇಟ್ ಕೌಂಟರಿನಲ್ಲಿ ಇದ್ದ ಸಿಬ್ಬಂದಿಗೆ ನಡೆದ ಘಟನೆಯನ್ನು ತಿಳಿಸಿದ್ದು ಅವರು ರಾತ್ರಿಯಾದ ಕಾರಣ ಬೆಳಿಗ್ಗೆ ಬಂದು ದೂರನ್ನು ನೀಡುವಂತೆ ನಮಗೆ ಹೇಳಿರುತ್ತಾರೆ. ನಾನು ಬರವಣಿಗೆ ಮುಖಾಂತರ ನಿಪಿ ೧ ನ್ನು ನೀಡಿರುತ್ತೇನೆ. ನಾನು ಮತ್ತು ನನ್ನ ಅಕ್ಕ ಆರೋಪಿತರ ಮುಖ ಚಹರೆ ಯನ್ನು ನೋಡಿರುವುದಿಲ್ಲ ಎಂದು ನಿಪಿ ೧ ರಲ್ಲಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ನಾನು ಆ ದಿನ ಯಾವುದೇ ವ್ಯಕ್ತಿಯನ್ನು ನೋಡದಿದ್ದರು ಸಹಃ ಆರೋಪಿತರನ್ನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ ೧ ನ್ನು ಎಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನ್ನ ಅಕ್ಕನಿಗೆ ಗೊತ್ತಿರುತ್ತದೆ. ಮು ಮಾ ೧ ನ್ನು ಯಾವ ಲೋಹದಿಂದ ಮಾಡಿರುತ್ತಾರೆ ಎಂದು ಗೊತ್ತೆ ಎಂದರೆ ಸಾಕ್ಷಿಯು ನನಗೆ ಬಂಗಾರದ್ದು ಎಂದು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನನಗೇನು ಗೊತ್ತಿಲ್ಲದಿದ್ದರು ಸಹಃ ನನ್ನ ಅಕ್ಕನ ಪರವಾಗಿ ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ</u> ೧ ಮತ್ತು ೨ ನೇ ಆರೋಪಿತರ ಪರವಾಗಿ ವಕೀಲರು ತಮ್ಮ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆ ಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ,

sd/xx

(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.